ಬೆವಿಕಂ

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## Bangalore Electricity Supply Company Limited

BESCOM

ಮು.ಪ್ರ.ವ್ಯ(ನಿ.ವ್ಯ)ರವರ ಕಛೇರಿ
ಕಂಪನಿ ಕಾರ್ಯಾಲಯ,
ಬೆ.ವಿ.ಕಂ. ಕೆ.ಆರ್.ವೃತ್ತ,
ಬೆಂಗಳೂರು-560001

## ಸುತ್ತೋಲೆ

ವಿಷಯ : ಕೇಂದ್ರೀಕೃತ ಸ್ವೀಕೃತಿ ಮತ್ತು ರವಾನೆ ಶಾಖೆಯಲ್ಲಿ ಸ್ವೀಕರಿಸಲ್ಪಡುವ ಮಾಹಿತಿ ಹಕ್ಕು ಅಡಿಯಲ್ಲಿನ ಅರ್ಜಿಗಳನ್ನು ನೇರವಾಗಿ ಸಂಬಂಧಿತ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ವಿಳಂಬವಿಲ್ಲದೆ ವರ್ಗಾಯಿಸುವ ಕುರಿತು.

**ಪ್ರಸ್ಥಾವನೆ:**

ಕೇಂದ್ರೀಕೃತ ಸ್ವೀಕೃತಿ ಮತ್ತು ರವಾನೆ ಚಟುವಟಿಕೆಯು ನಿಗಮ ವ್ಯವಹಾರ ಶಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ನಿಗಮ ಕಛೇರಿಯಲ್ಲಿ ಸ್ವೀಕೃತಿಗೊಳ್ಳುವ ಎಲ್ಲಾ ಸ್ವೀಕೃತಿಗಳನ್ನು ಸಂಭಂಧಪಟ್ಟ ಉ.ಪ್ರ.ವ್ಯ/ಸ.ಪ್ರ.ವ್ಯ ರವರು ಕೂಲಂಕುಷವಾಗಿ ಅವಗಾಹಿಸಿ ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ಶಾಖೆಗೆ ಕೂಡಲೆ ರವಾನಿಸುವುದು ಸೂಕ್ತ ಕ್ರಮವಾಗಿರುತ್ತದೆ. ಅದರಂತೆಯೇ ಮಾಹಿತಿ ಹಕ್ಕು ಅಡಿಯಲ್ಲಿ ಸ್ವೀಕೃತಿಗೊಳ್ಳುವ ಪ್ರತಿ ಅರ್ಜಿಯನ್ನು ಅವಗಾಹಿಸಿ ಸಂಬಂಧ ಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಕೂಡಲೆ ರವಾನಿಸುವುದು ಸೂಕ್ತ ಕ್ರಮವಾಗಿರುತ್ತದೆ. ಸಾಮಾನ್ಯವಾಗಿ ಅರ್ಜಿದಾರರುಗಳು ಅರ್ಜಿಯನ್ನು ವ್ಯವಸ್ಥಾಪಕ ನಿರ್ದೇಶಕರವರಿಗೆ ಹೆಸರಿಸಿದ್ದರೂ ಸಹ ವಿಷಯಾಧಾರಿತ ಸಾರ್ವಜನಿಕ ಮಾಹಿತಿ ಅಧಿಕಾರಿಯು ಕೋರಿರುವ ಮಾಹಿತಿಯನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ. ಹೀಗಿದ್ದರೂ ಸಹ ಸ್ವೀಕೃತಿಗೊಳ್ಳುವ ಪ್ರತಿ ಅರ್ಜಿಯನ್ನು ವ್ಯವಸ್ಥಾಪಕ ನಿರ್ದೇಶಕರವರ ಅವಗಾಹನೆಗಾಗಿ ರವಾನಿಸುವುದು ಅಸಂಭದ್ದವಾದದ್ದೆಂದು ವ್ಯವಸ್ಥಾಪಕ ನಿರ್ದೇಶಕರು ಪ್ರಸ್ಥಾಪಿಸುತ್ತ ಸೂಕ್ತ ನಿರ್ದೇಶನ ನೀಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಸದರಿ ಸುತ್ತೋಲೆ:

**ಸುತ್ತೋಲೆ ಸಂಖ್ಯೆ: ಬೆ.ವಿ.ಕಂ./ಬಿಸಿ-9/ಮು.ಪ್ರವ್ಯ.(ನಿ.ವ್ಯ.)/ಉ.ಪ್ರವ್ಯ.(ಮಾ.ಹ.)/ಕ-1(3)/2014-15/ಸಿವೈಎಸ್-** 77

**ದಿನಾಂಕ-** 03/02/2015

ನಿಗಮ ಕಛೇರಿಯಲ್ಲಿ ಸ್ವೀಕೃತಿಗೊಳ್ಳುವ ಪ್ರತೀ ಮಾಹಿತಿ ಹಕ್ಕು ಅಡಿಯಲ್ಲಿನ ಅರ್ಜಿಗಳನ್ನು ಸಂಭಂಧಪಟ್ಟ ಉ.ಪ್ರ.ವ್ಯ/ಸ.ಪ್ರ.ವ್ಯ ರವರು ಕೂಲಂಕುಷವಾಗಿ ಅವಗಾಹಿಸಿ ವಿಷಯಾಧಾರಿತ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕೂಡಲೇ ರವಾನಿಸುವುದು. ಸದರಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ವಿಳಂಬವಿಲ್ಲದೆ ಕೋರಿರುವ ಮಾಹಿತಿಯನ್ನು ಸಕ್ಷಮ್ಯ ಪ್ರಾಧಿಕಾರಿಯು ಅನುಮೋದಿಸಿದ ನಂತರ ಅರ್ಜಿದಾರರಿಗೆ ನಿಗದಿತ ಸಮಯದಲ್ಲಿಯೇ ಒದಗಿಸಲು ನಿರ್ದೇಶಿಸಲಾಗಿದೆ.

3/2/15

ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರ)

ಪ್ರತಿಗಳು:

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.
2. ಎಲ್ಲಾ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆ.ವಿ.ಕಂ. ಬೆಂಗಳೂರು.
3. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
4. ಪೊಲೀಸ್ ಅಧೀಕ್ಷಕರು, ಜಾಗೃತ ದಳ, ಬೆ.ವಿ.ಕಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮು.ಪ್ರ.ವ್ಯ.(ಹ ಮತ್ತು ವಾ), ಬೆ.ವಿ.ಕಂ. ರವರ ಆಪ್ತ ಕಾರ್ಯಾದರ್ಶಿರವರುಗಳಿಗೆ.
6. ಬೆ.ವಿ.ಕಂ ಅಂತರ್ಜಾಲ.
7. ಮಹಾ ಕಡತ.